# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ಗುರುತಿನ ಪ್ರಶ್ನೆ

ದಿನಾಂಕ : 09-03-2021 ಪ್ರಶ್ನೆ ಸಂಖ್ಯೆ : 122(855)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎನ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 09-03-2021

ಉತ್ತರಿಸುವ ಸಚಿವರು: ಸಹಕಾರ ಸಚಿವರು

ವಿಷಯ : ನಿವೇಶನ ನೀಡದೆ ವಂಚಿಸಿರುವ ಬಗ್ಗೆ

(ಅ) ಬೆಂಗಳೂರು ನಗರದಲ್ಲಿ ಇಲ್ಲಿಯವರೆಗೆ ನೋಂದಾಯಿತಗೊಂಡು ಕಾರ್ಯ ನಿರ್ವಹಿಸುತ್ತಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಸಂಖ್ಯೆ ಎಷ್ಟು; ಅವು ಯಾವುವು; (ಮಾಹಿತಿ ನೀಡುವುದು)

(ಆ) ಇವುಗಳಲ್ಲಿ, ಅವ್ಯವಹಾರ ಮಾಡಿರುವ ಆರೋಪ ಹೊಂದಿರುವ ಕಲಂ 64ರಡಿ ವಿಚಾರಣೆ ನಡೆಯುತ್ತಿರುವ ಸಂಘಗಳ ಸಂಖ್ಯೆ ಎಷ್ಟು;

(ಇ) ನ್ಯಾಷನಲ್ ಟೆಕ್ನೋಲಾಜಿಕಲ್ ಇನ್ಸಿಟ್ಯೂಷನ್ಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಕುಮಾರ ಕೃಪ ವೆಸ್ಟ್, ಬೆಂಗಳೂರು ಈ ಸಂಘವನ್ನು ಯಾವಾಗ ನೋಂದಾವಣಿ ಮಾಡಲಾಗಿದೆ; ಇದರ ಉದ್ದೇಶಗಳೇನು; (ವಿವರವಾದ ಮಾಹಿತಿ ನೀಡುವುದು)

(ಈ) ಈ ಸಂಘವು ಪ್ರಾರಂಭದಿಂದ ಇಲ್ಲಿಯವರೆಗೆ ಎಷ್ಟು ಬಡಾವಣೆಗಳನ್ನು ನಿರ್ಮಾಣ ಮಾಡಿದೆ; ಎಷ್ಟು ಜನ ಸದಸ್ಯರಿಗೆ ನಿವೇಶನ/ಮನೆ ಹಂಚಿಕೆ ಮಾಡಿದೆ; (ವಿವರವಾಗಿ ವರ್ಷವಾರು ಮಾಹಿತಿ ನೀಡುವುದು)

(ಉ) ಸಂಘದ ಕೆಲವು ಸದಸ್ಯರಿಗೆ ನಿವೇಶನದ ಹಂಚಿಕೆ ಮಾಡಿ ನಂತರ ನಿವೇಶನ ನೀಡದೆ ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಇವರಿಗೆ ನ್ಯಾಯ ಒದಗಿಸಲಾಗುವುದು?